“ಓ, ನಿಂಗೂ ಶನಿ ಹೆಗಲೇರಿಬಿಟ್ಟಿದ್ಯಾ? ನನ್ನ ಹಣೇಬರಾನೂ ಅದೇ. ಪಡೆದಿದ್ದು ಉಣ್ತೇಯೋ, ದುಡಿದದ್ದು ಉಣ್ತೇಯೋ ಅಂತ ಸುಮ್ನೆ ಹೇಳೋದಲ್ಲ...” ವೆಂಕಪ್ಪಯ್ಯನ ಉದ್ಗಾರ ಕೇಳಿ ಒಳಗಿದ್ದ ಅತ್ತೆ, ಸೊಸೆ ಮಕಮಕ ನೋಡಿಕೊಂಡು ನಕ್ಕರು.

★★★

“ಒಂದು ಗಳಿಗೆ ಮಲಕ್ತಾ...” ಎನ್ನುತ್ತಾ ಮುಂಜಗುಲಿಗೆ ಅಂಟಿಕೊಂಡಿದ್ದ, ನೆಂಟರಿಗೆ ಮೀಸಲಿಟ್ಟ ಕೋಣೆ ತೋರಿಸಿ ಮಲಗಲು ಹೋದರು ವೆಂಕಪ್ಪಯ್ಯ.

“ಎಂತಕ್ಕೆ ಬಂದಿದ್ದಂತೆ?” ಸೊಸೆಯ ಜೊತೆ ಉಣ್ಣಲು ಕೂತಿದ್ದ ಲೀಲಮ್ಮ ಬಾಯಲ್ಲಿದ್ದುದನ್ನು ನುಂಗಲೂ ಪುರುಸೊತ್ತಿಲ್ಲದೆ ಎಡಗೈ ಹೆಬ್ಬೆರಳನ್ನು ಮೇಲೆ, ಕೆಳಗೆ ಆಡಿಸಿ ಸೈಗೆ ಮಾಡಿದರು. ಕೆಳತುಟಿ ಮುಂಚಾಚಿ, ಭುಜ ಕುಣಿಸಿ ಅದೇ ಸೈಗೆ ಭಾಷೆಯಲ್ಲಿ ‘‘ಗೊತ್ತಿಲ್ಲ’’ ಎಂದು ಉತ್ತರಿಸಿ ವೆಂಕಪ್ಪಯ್ಯ ಊಟದಳಗು ದಾಟಿ ಬಚ್ಚಲು ಹೊಕ್ಕರು. ‘ಯಾಕೆ ಬಂದ?’ ಎನ್ನುವ ಪ್ರಶ್ನೆ ಅವರ ತಲೆಯನ್ನೂ ಕೊರೆಯುತ್ತಿತ್ತು. ಅದಕ್ಕಿಂತಾ ಹೆಚ್ಚು ಮನಸ್ಸಿಗೆ ಸಂತೋಷವಾಗಿರುವುದು ನಿಜ. ಹಳೆಯದೆಲ್ಲಾ ನೆನಪಿಸಿಕೊಂಡು ಮಾತಾಡಬಲ್ಲ ಪರಿಚಿತರು ಒಬ್ಬೊಬ್ಬರಾಗಿ ಪೆಟ್ಟಿಗೆ ಕಟ್ಟೆಯಾಗಿದೆ. ಇರುವ ಬೆರಳೆಣಿಕೆಯವರೂ ಎಲ್ಲೆಲ್ಲೋ ಹಂಚಿ ಹೋಗಿದ್ದಾರೆ. ಮನೆಯವರಿಗೆ ಇವರ ಹತ್ತಿರ ಪುರುಸೊತ್ತಾಗಿ ಕೂತು ಮಾತಾಡಲು ಸಸಾರ. ಬೇರೆಯವರು ಬೇಡ, ಸ್ವತಾ ತಾಳಿ ಕಟ್ಟಿಸಿಕೊಂಡ ಹೆಂಡತಿಯೇ ಮೂಗು ಮುರಿಯುತ್ತಾಳೆ. ‘ಶುರುವಾಯ್ತು ಹಳೇ ಪುರಾಣ’ ಎನ್ನುತ್ತಾ ಮುಖ ಮುರಿಯುವಂತೆ ಕೂತಲ್ಲಿಂದ ಎದ್ದು ಹೋಗುತ್ತಾಳೆ. ಈ ವಯಸ್ಸಲ್ಲಿ ಹಳೇ ಪುರಾಣವಲ್ಲದೆ ಹೊಸ ಪುರಾಣ ಏನಿರುತ್ತದೆ? ಪುರಾಣ ಎನ್ನುವುದೇ ಹಳೆಯದಕ್ಕಲ್ಲವಾ? ‘ಹೇಳಿದ್ದನ್ನೇ ತಿರುಗಾ ಮುರುಗಾ ಹೇಳ್ತೀರಿ. ಹೋಗ್ಲಿ ಅಂದ್ರೆ ಅದೇ ಪದ, ಅದೇ ವಾಕ್ಯ. ಅದರಲ್ಲೂ ಬದಲಾವಣೆ ಇಲ್ಲ...’ ಹೆಂಡತಿ ಹೇಳಿದರೆ ವೆಂಕಪ್ಪಯ್ಯ ಒಪ್ಪಲು ತಯಾರಿಲ್ಲ. ‘ನೂರು ಸಲ ಈ ಕತೆ ಹೇಳಿದೀರಿ’ ಎಂದು ಲೀಲಮ್ಮ ಕಡ್ಡಿ ಮುರಿದಂತೆ ಹೇಳುವಾಗ ‘ಓತಿಕೇತಕ್ಕೆ ಬೇಲೀಗೂಟ ಸಾಕ್ಷಿ’ ಅನ್ನುವಂತೆ ಸೊಸೆಯ ಸಾಕ್ಷಿ. ವಯಸ್ಸಿಗೆ ತಕ್ಕ ಹಾಗೆ ಸ್ವಲ್ಪ ಮರೆವು ಬಂದಿದೆಯಪ್ಪಾ. ‘ಯಾವ ವಾರ? ಯಾವ ತಿಂಗಳು?, ಗಂಟೆ ಎಷ್ಟು?’ ಎನ್ನುವ ಸಾಮಾನ್ಯ ಪ್ರಶ್ನೆಗೆ ಉತ್ತರಿಸುವುದಕ್ಕೂ ಹೆಂಡತಿಗೆ ಧಿಮಾಕು. ‘ಈಗಷ್ಟೇ ಕೇಳಿ ಬಾಯಿ ಮುಚ್ಚಿದೀರಿ. ಯಾವ ವಾರ ಆದ್ರೆ ಏನು? ಯಾವ ತಿಂಗಳಾದ್ರೆ ಏನು?’ ಎಂದು ದಬಾವಣೆ ಹಾಕುವಷ್ಟು ಬದಲಾಗಿಬಿಟ್ಟಿದ್ದಾಳೆ ಹೆಂಡತಿ. ‘ಹೌದು ಮಾವಯ್ಯಾ, ಈಗೊಂದು ಗಂಟೆಯಿಂದ ಹತ್ತನೇ ಸಲ ನೀವು ಕೇಳ್ತಿರೋದು’ ಎಂದು ವೈಸಿಕೊಂಡು ಮಾತಾಡುವ ಸೊಸೆ. ವೆಂಕಪ್ಪಯ್ಯನಿಗೆ ನಂಬಿಕೆ ಬರುವುದಿಲ್ಲ. ಎಲ್ಲಾ ಸೇರಿಕೊಂಡು ತನ್ನನ್ನು ಮೂರ್ಖನನ್ನಾಗಿ ಮಾಡುತ್ತಿದ್ದಾರೆ ಎಂದೇ ವಾದಿಸುತ್ತಾರೆ ಅವರು. ಹಾಗೇ ನಂಬಿಕೊಂಡಿದ್ದಾರೆ.

‘ಪತಿವ್ರತೆ ಅನ್ನಿಸ್ಕೊಳ್ಳೋದು ಅಂದುಕೊಂಡಷ್ಟು ಸುಲಭ ಅಲ್ಲ ಕಣೇ. ಕೇಳಿದ್ದನ್ನೇ ಕೇಳೋರಿಗೆ ಸಮಾಧಾನವಾಗಿ ಉತ್ತರ ಕೊಡೋಕೆ ನನ್ನ ಕೈಲಲ್ಲ, ಪಂಚಮಹಾಪತಿವ್ರತೆಯರಿಂದ್ಲೂ ಸಾಧ್ಯ ಆಗ್ತಿರ್ಲಿಲ್ಲ. ಎಷ್ಟು ಸಮಾಧಾನವಾಗಿರ್ಬೇಕು ಅಂದ್ಕೊಂಡ್ರೂ ರಗಳೆ ಹಿಡಿಸಿಬಿಡ್ತಾರೆ...’ ಆಹಾ, ತನ್ನನ್ನು ತಾನು ಒಪ್ಪಿಟ್ಟುಕೊಳ್ಳುವುದರಲ್ಲಿ ಹೆಂಡತಿ ಭಾರೀ ಜಾಣೆ, ‘ಅಪ್ಪನಿಗೆ ಸ್ವಲ್ಪ ಲೂಸ್ ಕಾಂಟ್ಯಾಕ್ಟ್’ ಅನ್ನುತ್ತಾನೆ ಮಗ. ಯಾರದ್ದೋ ಹೆಸರು ಕೇಳಿದರೆ ಗೊತ್ತಿರುತ್ತೆ ಆ ಹೆಸರು. ಮುಖ ಕಣ್ಣೆದುರು ಬರುವುದಿಲ್ಲ. ‘ಯಾರೇ...’ ಅಂದರೆ ಅದಕ್ಕೆ ಉತ್ತರಿಸುವಷ್ಟು ಸಹನೆ ಹೆಂಡತಿಗಿಲ್ಲ.

‘‘ಸ್ವಲ್ಪ ನೆನಪು ಮಾಡ್ಕೊಳ್ಳಿ. ಕೇಳಿದ್ದಕ್ಕೆಲ್ಲಾ ಯಾರೋ ಉತ್ತರ ಹೇಳ್ಲಿ ಅಂತ ತಲೆ ಖರ್ಚು ಮಾಡೋದೇ ಮರೆತ್ಬಿಟ್ಟಿದೀರಿ...’’ ಅನ್ನುತ್ತಾಳೆ ಹೆಂಡತಿ. ಮರೆವಂತೆ ಮರೆವು. ಎಷ್ಟೋ ವರ್ಷಗಳ ನಂತರ ಕಂಡ ಸ್ನೇಹಿತನನ್ನು ಚಕ್ ಅಂತ ಗುರುತು ಹಿಡಿಯಲಿಲ್ಲವಾ? ವಯಸ್ಸಾದ ಹಾಗೆ ಮನುಷ್ಯ